ಅ.ದಾ. ಸಂಃ 327/2024 ಡಿ.ಡಬ್ಲ್ಯು: 01

ದಿನಾಂಕಃ 02-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಬಿ.ಎಲ್ ವಾದಿ ಪರ ವಕೀಲರಿಂದಃ

ಶಿವಮ್ಮ ಮತ್ತು ನನ್ನ ಆಸ್ತಿ ವಾದಿಯ ಆಸ್ತಿಯ ಪೂರ್ವ ದಿಕ್ಕಿನಲ್ಲಿದೆ ಎಂದರೆ ಸರಿ. ನಿಡಿ-9 ರ ಪ್ರಕಾರ ಶಿವಮ್ಮ ರವರ ಆಸ್ತಿಯ ವಿಸ್ತೀರ್ಣ 3 ಗುಂಟೆ ಎಂದರೆ ಸರಿ. ನಿಡಿ-9 ರಲ್ಲಿ ವಾದಿಯ ಆಸ್ತಿಯನ್ನು ನಮೂದು ಮಾಡಿರುವುದಿಲ್ಲ. ನಿಡಿ-9 ರ ದಾಖಲೆಯು ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಯಾಗಿರುವುದಿಲ್ಲ ಎಂದರೆ ಸರಿ. ನಿಡಿ-9 ರಲ್ಲಿ ನನ್ನ ಆಸ್ತಿಯೂ ಸಹ ನಮೂದು ಆಗಿರುವುದಿಲ್ಲ ಎಂದರೆ ಸರಿ. ನಿಡಿ-9 ರಲ್ಲಿ ಶಿವಮ್ಮ ರವರ ಆಸ್ತಿಯ ಪೂರ್ವ-ಪಶ್ಚಿಮ ಹಾಗೂ ಉತ್ತರ-ದಕ್ಷಿಣದ ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ.

ನಿಡಿ-18 ರಲ್ಲಿ ಇರುವ ಆಸ್ತಿಯ ಪೂರ್ವ-ಪಶ್ಚಿಮ ಹಾಗೂ ಉತ್ತರ-ದಕ್ಷಿಣದ ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಡಿ-18 ರಲ್ಲಿ ಇರುವ ಆಸ್ತಿಯ ವಿಸ್ತೀರ್ಣ 2 1/2 ಗುಂಟೆ ಎಂದು ತೋರಿಸಿರುತ್ತಾರೆ. ನಿಡಿ-18 ರಲ್ಲಿ 2 1/2 ಗುಂಟೆ ಎಂದು ಸ್ಪಷ್ಟವಾಗಿ ಬರೆದಿದ್ದಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಿಡಿ-18 ಅನ್ನು ನೋಡಿ ಸರ್ವೆ ನಂ. 45/17 ರಲ್ಲಿ ಒತ್ತುವರಿ ಇರುವುದಿಲ್ಲ ಎಂದು ನಿಡಿ-18 ರಲ್ಲಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-18 ರಲ್ಲಿ ಇರುವ ಆಸ್ತಿಯ ವಿಸ್ತೀರ್ಣ 2 1/2 ಗುಂಟೆ ಎಂದು ನಿಡಿ- 18 ರಲ್ಲಿ ಎಲ್ಲಿಯೂ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-18 ರಲ್ಲಿ ಕಾಣಿಸುವ ಆಸ್ತಿಯ ವಿಸ್ತೀರ್ಣವನ್ನು ಲಿಂಕ್, ಅಡಿಗಳು ಅಥವಾ ಮೀಟರ್ ಗಳಲ್ಲಿ ನಿಡಿ-18 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ಅದರ ವಿಸ್ತೀರ್ಣ ಮೌಖಿಕವಾಗಿ ತಿಳಿಸಿದರು ಎಂದು ನುಡಿಯುತ್ತಾರೆ. ನಿಡಿ-18 ರಲ್ಲಿ ಕಾಣಿಸುವ ಉತ್ತರ ದಿಕ್ಕಿನ ಗೆರೆಯು ನನ್ನ ಆಸ್ತಿಯ ಪೂರ್ವಕ್ಕೆ ಇರುವ ಗೆರೆ ಎಂದರೆ ಸರಿ. ನಿಪಿ-11 ರಲ್ಲಿ ಕಾಣಿಸುವ ನೀಲಿ ಬಣ್ಣದ ಶೆಡ್ ನನ್ನ ಆಸ್ತಿಯ ಪೂರ್ವ ದಿಕ್ಕಿನಲ್ಲಿರುವ ಸದರಿ ಗೆರೆಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಗೆರೆಯನ್ನು ದಾಟಿ ಶೆಡ್ ಅನ್ನು ನಿರ್ಮಿಸಲಾಗಿದೆ ಎಂದು ನುಡಿಯುತ್ತಾರೆ. ನನ್ನ ಆಸ್ತಿ ಮತ್ತು ವಾದಿಯ ಆಸ್ತಿಯ ಉತ್ತರ ದಿಕ್ಕಿಗಿರುವ ರಸ್ತೆಯೇ ನಿಪಿ-11 ರಲ್ಲಿ ಕಾಣಿಸುತ್ತಿರುವ ರಸ್ತೆ ಎಂದರೆ ಸರಿ. ನಾನು ಕೊಂಡುಕೊಂಡಿರುವ ಆಸ್ತಿ ನಿಪಿ-11 ರಲ್ಲಿ ಕಾಣಿಸುವ ರಸ್ತೆಯ

ಬದಿಯಿಂದ ಪ್ರಾರಂಭವಾಗುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆ ಮತ್ತು ನನ್ನ ಆಸ್ತಿಯ ಮಧ್ಯೆ ಬೇರೆ ಯಾರದ್ದೂ ಆಸ್ತಿ ಇರುವುದಿಲ್ಲ. ಸದರಿ ರಸ್ತೆಯಿಂದ ಎಷ್ಟು ಅಡಿಗಳನ್ನು ಬಿಟ್ಟು ನಾನು ಪಾಯ ಹಾಕಲು ಪ್ರಯತ್ನಿಸಿರುತ್ತೇನೆ ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಆಸ್ತಿಯಲ್ಲಿ ನಾನು ಪಾಯವನ್ನು ಹಾಕಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-11 ರಲ್ಲಿ ಕಾಣುವ ನೀಲಿ ಬಣ್ಣದ ಶೆಡ್ ವರೆಗೆ ನನ್ನ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ.

ನಿಡಿ-18 ರಲ್ಲಿ ತೋರಿಸಿರುವಂತೆ ನನ್ನ ಆಸ್ತಿಯ ದಕ್ಷಿಣ ದಿಕ್ಕಿಗೆ ಶಿವಮ್ಮ ರವರ ಆಸ್ತಿ ಬರುತ್ತದೆ ಎಂದರೆ ಸರಿ. ನನ್ನ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುವ ಖರೀದಿದಾರರ ಆಸ್ತಿಯ ವಿಸ್ತೀರ್ಣ 3 ಗುಂಟೆ ಬರುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಕ್ಷಿಣ ದಿಕ್ಕಿಗಿರುವ ಆಸ್ತಿಯು ಆಂಗ್ಲ ಭಾಷೆಯ 'L' ಅಕ್ಷರದ ಆಕಾರದಲ್ಲಿ ಇದೆ ಎಂದು ನುಡಿಯುತ್ತಾರೆ. ನನ್ನ ಆಸ್ತಿಯ ದಕ್ಷಿಣಕ್ಕೆ ಸುಜಾತರವರ ಆಸ್ತಿ ಇದೆ ಎಂದರೆ ಸರಿ. ನಿಡಿ-2 ರಲ್ಲಿ ನನ್ನ ಆಸ್ತಿಯ ಪೂರ್ವಕ್ಕೆ ಸುಜಾತರವರ ಆಸ್ತಿಯು ಆಂಗ್ಲ ಭಾಷೆಯ 'L' ಅಕ್ಷರದ ಆಕಾರದಲ್ಲಿ ಇದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸುಜಾತರವರ ಆಸ್ತಿ ಆಂಗ್ಲ ಭಾಷೆಯ 'L' ಅಕ್ಷರದ ಆಕಾರದಲ್ಲಿ ಇದೆ ಎಂದು ಸುಜಾತರವರು ಮತ್ತು ನಾನು ಒಪ್ಪಿಕೊಂಡೇ ನಿಡಿ-2 ರ ವಿಭಾಗ ಪತ್ರವನ್ನು ಬರೆದುಕೊಂಡೆವು ಎಂದು ನುಡಿಯುತ್ತಾರೆ. ನಿಡಿ-2 ರ ವಿಭಾಗ ಪತ್ರವನ್ನು ಮಾಡಿಕೊಂಡಾಗ ನಾನು ಮತ್ತು ಸುಜಾತ ರವರು ನಮ್ಮ ಆಸ್ತಿಗಳಿಗೆ ಸಂಬಂಧಪಟ್ಟಂತೆ 11-ಇ ನಕ್ಷೆಯನ್ನು ಪಡೆದುಕೊಂಡೆವು. ಸದರಿ ನಕ್ಷೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿ ನಿಡಿ-1 ರಿಂದ 21 ರ ದಾಖಲೆಗಳನ್ನು ನೋಡಿ ಸದರಿ ನಕ್ಷೆಯೇ ನಿಡಿ-7 ರ ದಾಖಲೆ ಆಗಿರಬಹುದು ಎಂದು ನುಡಿಯುತ್ತಾರೆ.

ಸುಜಾತ ಮತ್ತು ನಾನು ನಿಡಿ-2 ರ ಮೂಲಕ ವಿಭಾಗ ಮಾಡಿಕೊಂಡಾಗ ನಮ್ಮ ಆಸ್ತಿಗಳ ಪೂರ್ವ ದಿಕ್ಕಿಗೆ ಓಡಾಡಲು ರಸ್ತೆಯನ್ನು ಬಿಟ್ಟುಕೊಂಡಿದ್ದೆವು. ಸಾಕ್ಷಿಯು ಮುಂದುವರೆದು ಆಂಗ್ಲ ಭಾಷೆಯ 'L' ಅಕ್ಷರದ ಆಕಾರದಲ್ಲಿ ಇರುವ ಆಸ್ತಿ ತನಗೆ ಬೇಕೆಂದು ಸುಜಾತ ರವರು ಕೇಳಿದ ಕಾರಣ 3 ಗುಂಟೆಯನ್ನು ಸುಜಾತರವರಿಗೆ ಬಿಟ್ಟುಕೊಟ್ಟೆನು ಎಂದು ನುಡಿಯುತ್ತಾರೆ. ಓಡಾಡಲು ಬಿಟ್ಟ ರಸ್ತೆಯನ್ನು ಹೊರತುಪಡಿಸಿ

ಸುಜಾತರವರಿಗೆ 3 ಗುಂಟೆ ಆಸ್ತಿ ಹಾಗೂ ನನಗೆ 2 1/2 ಆಸ್ತಿಯನ್ನು ನಿಡಿ-2 ರ ಮೂಲಕ ವಿಭಾಗ ಮಾಡಿಕೊಂಡೆವು ಎಂದರೆ ಸಾಕ್ಷಿ ಸದರಿ ರಸ್ತೆಯನ್ನು ಒಳಗೊಂಡಂತೆ ಸುಜಾತರವರಿಗೆ 3 ಗುಂಟೆ ಆಸ್ತಿಯನ್ನು ವಿಭಾಗದ ಮೂಲಕ ನೀಡಲಾಯಿತು ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ಸೇರಿ 3 ಗುಂಟೆಯನ್ನು ಸುಜಾತರವರಿಗೆ ನೀಡಲಾಗಿದೆ ಎಂದು ನಿಡಿ-2 ರ ವಿಭಾಗ ಪತ್ರದಲ್ಲಿ ಬರೆಯಲಾಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಿಡಿ-2 ರ ವಿಭಾಗ ಪತ್ರವನ್ನು ಓದಿ ಸುಜಾತ ಮತ್ತು ನನ್ನ ಮಧ್ಯೆ ಆದ ಅಗ್ರಿಮೆಂಟ್ ಪೇಪರ್ ಅಥವಾ ರೆಜಿಸ್ಟರ್ ಪೇಪರ್ ರಲ್ಲಿ ಸದರಿ ವಿಚಾರವನ್ನು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಸದರಿ ಅಗ್ರಿಮೆಂಟ್ ಪೇಪರ್ ಅನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ನಿಡಿ-1 ರಿಂದ 21 ರ ಪೈಕಿ ಸದರಿ ಅಗ್ರಿಮೆಂಟಿ ಪೇಪರ್ ಯಾವುದು ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆಗಳ ಪೈಕಿ ಅಗ್ರಿಮೆಂಟ್ ಪೇಪರ್ ಯಾವುದೆಂದು ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಮತ್ತು ಸುಜಾತರವರು 5 1/2 ಗುಂಟೆಯನ್ನು ಖರೀದಿಸಿದಾಗ ಮಾಡಿಸಿದ ನಕ್ಷೆಯೇ ನಿಡಿ-4 ರ ನಕ್ಷೆ ಎಂದರೆ ಸರಿ. ನಿಡಿ-4 ರಲ್ಲಿ ಉತ್ತರಕ್ಕಿರುವ ಆಸ್ತಿಯ ವಿಸ್ತೀರ್ಣ 15*20 ಲಿಂಕ್ ಹಾಗೂ ದಕ್ಷಿಣಕ್ಕಿರುವ ಆಸ್ತಿಯ ವಿಸ್ತೀರ್ಣ 15*40 ಲಿಂಕ್ ಗಳು ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ನಿಡಿ-4 ರ ಸ್ಕೆಚ್ ಸರಿಯೋ ತಪ್ಪೋ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಸ್ಕೆಚ್ ಸರಿಯಾಗಿದೆ ಆದರೆ ಅದರಲ್ಲಿರುವ ವಿಸ್ತೀರ್ಣ ಸರಿಯಾಗಿಲ್ಲ ಎಂದು ನುಡಿಯುತ್ತಾರೆ. ಸುಜಾತ ಮತ್ತು ನಿಮ್ಮ ಆಸ್ತಿಯ ಪೈಕಿ ಉತ್ತರ ದಿಕ್ಕಿಗಿರುವ ಆಸ್ತಿಯ ಅಗಲ ಕಡಿಮೆ ಇದೆ ಹಾಗೂ ದಕ್ಷಿಣ ದಿಕ್ಕಿಗಿರುವ ಆಸ್ತಿಯ ಅಗಲ ಹೆಚ್ಚು ಇದೆ ಎಂದರೆ ಸಾಕ್ಷಿ ದಾಖಲೆಗಳನ್ನು ಪರಿಶೀಲಿಸಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-18 ರ ಸ್ಕೆಚ್ ಅನ್ನು ತಯಾರಿಸಿದಾಗ ಯಾವ ದಿಕ್ಕಿಗೆ ಅಗಲ ಹೆಚ್ಚದೆ ಹಾಗೂ ಯಾವ ದಿಕ್ಕಿಗೆ ಅಗಲ ಕಡಿಮೆ ಇದೆ ಎಂಬ ವಿಚಾರವನ್ನು ಭೂ ಮಾಪಕರು ನಮಗೆ ತಿಳಿಸಲಿಲ್ಲ. ಸಾಕ್ಷಿಯು ಮುಂದುವರೆದು ಯಾವ ದಿಕ್ಕಿಗೂ ಒತ್ತುವರಿ ಆಗಿರುವುದಿಲ್ಲವೆಂದು ಭೂ ಮಾಪಕರು ನಮಗೆ ತಿಳಿಸಿದರು ಎಂದು ನುಡಿಯುತ್ತಾರೆ. ನಾವು ಕೊಂಡುಕೊಂಡ 5 1/2 ಗುಂಟೆ ಆಸ್ತಿಯು ಚೌಕಾಕಾರದಲ್ಲಿ / Square ಆಕಾರದಲ್ಲಿ ಇರುವುದಿಲ್ಲ ಆದರೆ ವಾರೆ / Cross ಆಗಿರುತ್ತದೆ ಎಂದರೆ ಸರಿ. ನಿಡಿ-4 ರ ದಾಖಲೆಯಲ್ಲಿ ತೋರಿಸಿರುವ ವಿಸ್ತೀರ್ಣದಂತೆ ನಿಡಿ-18 ರ ನಕ್ಷೆಯಲ್ಲಿ

ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಡಿ-18 ರಲ್ಲಿ ತೋರಿಸಿರುವ ಆಕಾರವು ಸರಿಯಾಗಿದೆ ಎಂದು ನುಡಿಯುತ್ತಾರೆ. ವಾದಿಯ ಆಸ್ತಿಯನ್ನು ಒತ್ತುವರಿ ಮಾಡಬೇಕೆಂಬ ಉದ್ದೇಶದಿಂದ ನಾನು ನಿಡಿ-18 ರ ನಕ್ಷೆಯಲ್ಲಿ ತಪ್ಪು ಆಕಾರವನ್ನು ತೋರಿಸಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ಕಾರಣದಿಂದಾಗಿ ನಿಡಿ-18 ರಲ್ಲಿ ನಮ್ಮ ಆಸ್ತಿಯ ವಿಸ್ತೀರ್ಣವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

P.M Sachin Digitally signed by P.M Sachin Date: 2025.04.05 10:36:49 +0530

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು